## ಫ್ಯಾಕ್ಟ್ ಶೀಟ್

- ಸೆಣಬು ಉಷ್ಣವಲಯದ ಸಸ್ಯವಾಗಿದೆ. ಇದಕ್ಕೆ ಬೆಚ್ಚಗಿನ ಮತ್ತು ಆರ್ದ್ರ ವಾತಾವರಣದ ಅವಶ್ಯಕತೆ ಇರುತ್ತದೆ. 24ರಿಂದ 37 ಡಿಗ್ರಿ ಸೆಲ್ಸಿಯಸ್ ನಡುವಿನ ತಾಪಮಾನದಲ್ಲಿ ಸೆಣಬಿನ ಇಳುವರಿ ಚೆನ್ನಾಗಿರುತ್ತದೆ.
- ಜೇಡಿ ಮಣ್ಣು ಮತ್ತು ಮರಳು ಮಣ್ಣಿನಲ್ಲಿ ಸೆಣಬಿನ ಇಳುವರಿ ಹೆಚ್ಚು. ಸ್ಯಾಟಲೈಟ್ ಮತ್ತು ಜಲ್ಲಿ ಮಣ್ಣಿನಲ್ಲಿ ಬೆಳೆ ಕುಂಠಿತಗೊಳ್ಳುತ್ತದೆ.
- ಸೆಣಬು ಪರಿಸರಸ್ನೇಹಿ ಬೆಳೆ–ಉತ್ಪನ್ನ ಎರಡೂ ಆಗಿದೆಯಲ್ಲದೆ, ಬಹುಬೇಗ ಜೈವಿಕ ವಿಘಟನೆ (ಬಯೊಡಿಗ್ರೇಡಬಲ್) ಹೊಂದುತ್ತದೆಯಾದ್ದರಿಂದ ಅತಿ ಕಡಿಮೆ ಕಾರ್ಬನ್ ಹೆಜ್ಜೆಗುರುತು ಮೂಡಿಸುತ್ತವೆ.
- ಭಾರತದ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವ ಪ್ರಮುಖ ಉದ್ಯಮವಾಗಿರುವುದರಿಂದ ಅಸಂಖ್ಯಾತ ಬಡ ಕೂಲಿ ಕಾರ್ಮಿಕರಿಗೆ ಸೆಣಬು ಕೃಷಿ–ಉದ್ಯಮದಲ್ಲಿ ಕೆಲಸ ಸಿಗುತ್ತಿದೆ.
- ನೈಸರ್ಗಿಕ ಸ್ವರೂಪ ಮತ್ತು ನವೀಕರಣದ ಗುಣಗಳಿಂದಾಗಿ ಸೆಣಬಿನ ಉತ್ಪನ್ನಗಳು ಸುಸ್ಥಿರ ಫ್ಯಾಷನ್ ಉದ್ಯಮದಲ್ಲೂ ಜನಪ್ರಿಯವಾಗಿದೆ.

ಬೆಲೆ ನಮ್ಮವರ ಬೆಲೆಗಿಂತ ಕಡಿಮೆಯಾದ್ದರಿಂದ, ನಮ್ಮ ಉದ್ಯಮ ನೆಲಕಚ್ಚಿದೆ. ಜನ ಬಾಂಗ್ಲಾದ ಉತ್ಪನ್ನಗಳನ್ನೇ ಖರೀದಿಸುತ್ತಿದ್ದಾರೆ. ಅಲ್ಲಿನ ಉತ್ಪನ್ನ ವೆಚ್ಚ, ಕಡಿಮೆ ಕೂಲಿ, ಉತ್ಪಾದನೆಗೆ ಬಳಸುವ ವಿದ್ಯುತ್‌ನ ಕಡಿಮೆ ದರ ಮತ್ತು ರಫ್ತಿನ ಮೇಲೆ ಹೆಚ್ಚಿನ ಸಬ್ಸಿಡಿ ಇರುವುದರಿಂದ, ಸೆಣಬು ಉದ್ಯಮದಲ್ಲಿ ಬಾಂಗ್ಲಾದೇಶ ಹೆಚ್ಚಿನ ಆದಾಯ ಗಳಿಸುತ್ತಾ ನಮಗಿಂತ ಮುಂದಿದೆ. ಅಲ್ಲಿನ ಸರ್ಕಾರ ರಫ್ತಿನ ಮೇಲೆ ನೀಡುವ ಸಬ್ಸಿಡಿ ಶೇ. 9–10ರಷ್ಟು ಇದ್ದರೆ, ನಮ್ಮಲ್ಲಿನ ಸಬ್ಸಿಡಿ ಕೇವಲ ಶೇ. 1.5ರಿಂದ 3ರಷ್ಟು ಮಾತ್ರ. ಅಲ್ಲದೆ, ಕಟಾವಿನ ನಂತರ ಸೆಣಬನ್ನು ನಿಧಾನವಾಗಿ ಹರಿಯುವ ನೀರಿನಲ್ಲಿ 30 ಸೆಂ.ಮೀ. ಆಳದಲ್ಲಿ ನೆನೆ ಇಡಬೇಕಾಗುತ್ತದೆ. ನಮ್ಮ ರೈತರಿಗೆ ಅಂಥ ಸೌಲಭ್ಯಗಳಿಲ್ಲ. ನದಿ ಮಾಲಿನ್ಯಗೊಳ್ಳುತ್ತದೆ ಎಂಬ ಕಾರಣಕ್ಕೆ ಅನುಮತಿ ಇಲ್ಲ. ಹಾಗಾಗಿ ನಿಂತ ನೀರಿನಲ್ಲಿ, ಕೆರೆ–ಕುಂಟೆಗಳಲ್ಲಿ ಸೆಣಬನ್ನು ನೆನೆಹಾಕಲಾಗುತ್ತದೆ. ಕಲುಷಿತ ನೀರಿನಲ್ಲಿ ನೆನೆಹಾಕುವುದರಿಂದ ಅದರ ಬಣ್ಣವೇ ಬದಲಾಗಿಬಿಡುತ್ತದೆ. ಹರಿಯುವ ನೀರಿನಲ್ಲಿ ನೆನೆಯುವ ಸೆಣಬು ಹೊಳಪಿನಿಂದ ಕೂಡಿದ್ದು, ಬಣ್ಣ ಮತ್ತು ಶಕ್ತಿ ಎರಡನ್ನೂ ಉಳಿಸಿಕೊಳ್ಳುತ್ತದೆ. ಈ ಸಮಸ್ಯೆಯನ್ನು ನೀಗಲು 'ಸೆಂಟ್ರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ಜ್ಯೂಟ್ ಅಂಡ್ ಅಲೈಡ್ ಫೈಬರ್ಸ್'ನವರು 'ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್' ಸಹಯೋಗದಲ್ಲಿ ನೀರು ನಿಧಾನವಾಗಿ ಹರಿಯುವ, ಸೆಣಬು ನೆನೆಸಲು ಸರಿಹೊಂದುವ ಟ್ಯಾಂಕೊಂದನ್ನು ಅಭಿವೃದ್ಧಿಪಡಿಸಿದ್ದಾರಾದರೂ, ಅದಿನ್ನೂ ಕೃಷಿಕರಿಗೆ ತಲುಪಿಲ್ಲ.

ಸೆಣಬು ಪರಿಸರಸ್ನೇಹಿ ಉತ್ಪನ್ನವಾದ್ದರಿಂದ, ಅದನ್ನು ಬಳಸಿಕೊಂಡು ಗೋಣಿಚೀಲಗಳಷ್ಟೇ ಅಲ್ಲದೆ ಇತರೆ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸಲು ನಮ್ಮ ಉದ್ಯಮಗಳು ಮುಂದಾಗಬೇಕು ಎನ್ನುವ 'ಭಾರತ ಸೆಣಬು ಮಂಡಳಿ'ಯ ನಿರ್ದೇಶಕ ಮೊಲೈ ಚಕ್ರವರ್ತಿ, ಅದಕ್ಕೆ ಬೇಕಾದ ತಾಂತ್ರಿಕ ಅನುಕೂಲಗಳು ನಮ್ಮಲ್ಲಿವೆ ಎನ್ನುತ್ತಾರೆ. ಹಾಗಿದ್ದ ಮೇಲೆ ಸೆಣಬಿನ ವೈವಿಧ್ಯಮಯ ಉತ್ಪನ್ನಗಳ ತಯಾರಿಕೆಗೆ ನಮ್ಮ ಉದ್ಯಮಗಳೇಕೆ ಉತ್ಸುಕತೆ ತೋರಿಸುತ್ತಿಲ್ಲ?

ಪ್ಲಾಸ್ಟಿಕ್ ಬಳಕೆ ನಿಷೇಧವಿರುವ ಪ್ರದೇಶಗಳಲ್ಲಿ ಸೆಣಬಿನ ಬಳಕೆಗೆ ಭಾರೀ ಬೇಡಿಕೆ ಇರುತ್ತದೆ. ಫ್ಯಾಷನ್ ಉದ್ಯಮದ ಅನೇಕ ಬಗೆಯ ಪಾದರಕ್ಷೆಯ ಉತ್ಪನ್ನಗಳು ಸೆಣಬಿನಿಂದಲೇ ತಯಾರಾಗುತ್ತವೆ. ಶೇ. 85ರಷ್ಟು ಸೆಣಬು ಇಲ್ಲಿಯೇ ಬಳಕೆಯಾಗುತ್ತದೆ ಮತ್ತು ಉಳಿದ ಶೇ. 15ರಷ್ಟು ರಫ್ತಾಗುತ್ತದೆ. ಆದರೆ ಬಾಂಗ್ಲಾದೇಶದಲ್ಲಿ ಇದಕ್ಕೆ ತದ್ವಿರುದ್ಧ ಪರಿಸ್ಥಿತಿ ಇದೆ.

ಭಾರತದಲ್ಲಿ ಉತ್ಪಾದನೆಯಾಗುತ್ತಿರುವ ಸೆಣಬಿನ ಭಾಗದ ಶೇ. 90 ಭಾಗ ಪ್ಯಾಕೇಜಿಂಗ್‌ಗೇ ಬಳಕೆಯಾಗುತ್ತದೆ. ಉಳಿದ ಭಾಗ ಇತರ ಉತ್ಪನ್ನಗಳ ತಯಾರಿಕೆಗೆ ಬಳಕೆಯಾಗುತ್ತದೆ. ಸೆಣಬಿನ ಮಿಲ್ಲುಗಳ ಉತ್ಪನ್ನದ ಶೇ. 70ರಷ್ಟನ್ನು ಸರ್ಕಾರ ಕೊಂಡುಕೊಳ್ಳುತ್ತದೆ. ಆದ್ದರಿಂದ ಮಿಲ್ಲುಗಳು ವಿವಿಧ ಉತ್ಪನ್ನಗಳಿಗೆ ತೊಡಗಿಸಿಕೊಳ್ಳಬಹುದು. ಕಾಗದದ ಮೇಲಿನ ಈ ಲೆಕ್ಕಾಚಾರ ಆಕರ್ಷಕವಾಗಿದ್ದರೂ, ವಾಸ್ತವ ಹಾಗಿಲ್ಲ. ಇರುವ ಮಿಲ್ಲುಗಳಲ್ಲೆಲ್ಲ ಹಳೆಯ ಯಂತ್ರಗಳಿರುವುದರಿಂದ ತ್ವರಿತ ಗತಿಯ ಮತ್ತು ಗುಣಮಟ್ಟದ ಉತ್ಪಾದನೆ ಸಾಧ್ಯವಿಲ್ಲ. ಕೆಲಸಗಾರರ ಕೊರತೆ ಮತ್ತು ಅಸಮರ್ಪಕ ಆಡಳಿತದಿಂದಾಗಿ ಎಪ್ಪತ್ತರಲ್ಲಿ ಹತ್ತು ಮಿಲ್ಲುಗಳು ಮುಚ್ಚಿವೆ; 60 ಸಾವಿರ ಜನ ಕೆಲಸ ಕಳೆದುಕೊಂಡಿದ್ದಾರೆ. ರಾಜ್ಯ ಸರ್ಕಾರವು ಕಚ್ಚಾ ಸೆಣಬಿನ ಕ್ವಿಂಟಲ್ ಬೆಲೆಯನ್ನು ನಿಗದಿಗೊಳಿಸಿದ್ದು ಕಡಿಮೆಯಾಯಿತು ಎಂದು ದೊಡ್ಡ ಪ್ರತಿಭಟನೆಗಳಾದವು. ಕೂಡಲೇ ರಾಜ್ಯಸರ್ಕಾರವು ಆದೇಶ ಹಿಂಪಡೆಯಿತು. ನಂತರ ಕೇಂದ್ರ ಸರ್ಕಾರ ಕ್ವಿಂಟಲ್‌ಗೆ 6500 ರೂಪಾಯಿ ನಿಗದಿಗೊಳಿಸಿ, ಮಿಲ್ಲುಗಳು ಇದೇ ದರದಲ್ಲಿ ಕಚ್ಚಾ ಸೆಣಬು ಖರೀದಿಸಬೇಕು ಎಂದಿತು. ಆದರೆ ರೈತರು 7 ಸಾವಿರದಿಂದ 7200 ರೂಪಾಯಿಗೆ ಕಮ್ಮಿಯಾದರೆ ಮಾರುವುದಿಲ್ಲ ಎಂದುಬಿಟ್ಟರು. ಅನಿವಾರ್ಯವಾಗಿ ಹೆಚ್ಚಿನ ಬೆಲೆ ನೀಡಬೇಕಾದ್ದರಿಂದ ಹತ್ತು ಮಿಲ್ಲುಗಳು ಬಾಗಿಲು ಹಾಕಿದವು.

### ಸಮಸ್ಯೆಗಳ ಸುಳಿಯಲ್ಲಿ ಉದ್ಯಮ

ಸೆಣಬಿನ ವಿಷಯದಲ್ಲಿ ಸರ್ಕಾರಗಳ ಬೇಜವಾಬ್ದಾರಿಯ ನಡೆಯೂ ನಷ್ಟಕ್ಕೆ ಕಾರಣ ಎನ್ನುತ್ತಾರೆ 'ಭಾರತ ಸೆಣಬು ಮಿಲ್ಲುಗಳ ಒಕ್ಕೂಟ'ದ ಅಧ್ಯಕ್ಷ ರಿಶವ್ ಕಜಾರಿಯ. ಗೋಣಿಚೀಲಗಳ ಬೆಲೆ ನಿಗದಿ ಮಾಡುವ ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಉದ್ಯಮ ಸಚಿವಾಲಯವು ಬೆಲೆ ನಿಗದಿ ಮಾಡಲು 2016ರಲ್ಲೇ ಮಂಡಳಿಯೊಂದನ್ನು ನೇಮಿಸಿ, ಆರು ತಿಂಗಳಲ್ಲಿ ವರದಿ ಸಲ್ಲಿಸಿ ಶಿಫಾರಸು ನೀಡಲು ಹೇಳಿತ್ತು. ಮಂಡಳಿಯ ಸದಸ್ಯರು ಚಂದ್ರಲೋಕಕ್ಕೆ ಹೋಗಿಬಂದರೋ ಏನೋ ಗೊತ್ತಿಲ್ಲ – ಬರೋಬ್ಬರಿ ಐದು ವರ್ಷಗಳ ನಂತರ, 2021ರಲ್ಲಿ ಶಿಫಾರಸು ನೀಡಿದರು. ಅದಾಗಿ ಮೂರು ವರ್ಷಗಳಾಗಿವೆ. ಇನ್ನೂ ಬೆಲೆ ನಿಗದಿಯಾಗಿಲ್ಲ. ಬೆಲೆ ನಿಗದಿ ಮಾಡುವ ಜವಾಬ್ದಾರಿ ಕೇಂದ್ರ ಜವಳಿ ಸಚಿವಾಲಯದ್ದು. ಮಂಡಳಿಯ ಶಿಫಾರಸಿನ ಬಗ್ಗೆ ಮಾಹಿತಿ ಸಂಗ್ರಹಿಸಿದ ಭಾರತ ಸೆಣಬು ಮಿಲ್ಲುಗಳ ಒಕ್ಕೂಟವು, 'ಅದು ಸರಿಯಾದ ಬೆಲೆಯಲ್ಲ, ಪರಿಷ್ಕರಿಸಿ ನಿಗದಿ ಮಾಡಿರಿ' ಎಂದು ಜವಳಿ ಸಚಿವರ ಮೇಲೆ ಒತ್ತಡ ಹೇರುತ್ತಿದೆ.

ಒಕ್ಕೂಟದ ಹೇಳಿಕೆಯ ಪ್ರಕಾರ, ಪ್ರತಿ ಟನ್ ತೂಕಕ್ಕೆ 3 ಸಾವಿರ ರೂಪಾಯಿ ನಷ್ಟವಾಗುತ್ತಿದೆ. 'ರೈತರು ಮಿಲ್ಲುಗಳಿಗೆ ನೀಡುವ ಕಚ್ಚಾ ಸೆಣಬಿನ ಬೆಲೆ ಮಾತ್ರ ಏರುತ್ತಲೇ ಇದೆ. ಆದರೆ ನಮ್ಮ ಉತ್ಪನ್ನಗಳಿಗೆ ಅದು ಸಿಗುತ್ತಿಲ್ಲ' ಎನ್ನುವ ಕಜಾರಿಯ, 'ಸೆಣಬು ಉದ್ಯಮ ಸಾವು–ಬದುಕಿನ ನಡುವೆ ಹೋರಾಟದಲ್ಲಿದೆ, ನಷ್ಟ ಅನುಭವಿಸುತ್ತಿರುವಾಗ ಹೊಸತನಕ್ಕೆ ಅವಕಾಶವೇ ಇಲ್ಲ' ಎಂದು ನಿರಾಶೆಯ ಮಾತುಗಳನ್ನಾಡುತ್ತಾರೆ.

ಕಳೆದ 37 ವರ್ಷಗಳಿಂದ ಸೆಣಬು ಉದ್ಯಮದಲ್ಲಿರುವ 'ಲೂಮ್‌ಟೆಕ್ಸ್ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್'ನ ಅಮಲೇಶ್ ಮಿಶ್ರ, 'ಎಲ್ಲೋ ಕೆಲವು ಮಿಲ್‌ಗಳು ನಷ್ಟವನ್ನು ಸರಿದೂಗಿಸಿಕೊಳ್ಳಬಹುದು,

